ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ ನ್ಯಾಯಾಲಯದಲ್ಲಿ,
ನ.ರಾ.ಪುರ.
ಸಿಸಿ ನಂ 143/2026

ಸಿ ಡಬ್ಲ್ಯೂಃ–11 /ಪಿ ಡಬ್ಲ್ಯೂ ಃ-06

| | |
|---|---|
| ಸಾಕ್ಷಿದಾರರ ಹೆಸರು | ಃ ಶಕುಂತಲಾ |
| ಗಂಡನ ಹೆಸರು | ಃ ಕೃಷ್ಣಮೂರ್ತಿ |
| ವಯಸ್ಸು | ಃ 29 ವರ್ಷ |
| ಉದ್ಯೋಗ | ಃ ಕೂಲಿ ಕೆಲಸ |
| ವಾಸಸ್ಥಳ | ಃ ಮಾವಿನಕಟ್ಟೆ, ಹೊಸದುರ್ಗ ತಾಲೂಕು. |

ದಿನಾಂಕಃ 07-07-2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.
ಮುಖ್ಯವಿಚಾರಣೆ ಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

**1.** ಮೃತ ಕೃಷ್ಣಮೂರ್ತಿ ನನ್ನ ಗಂಡನಾಗಬೇಕು. ಚಾಸಾ- 1 ನನ್ನ ಮಾವನಾಗಬೇಕು. ಚಾಸಾ-9 ರವರ ಪರಿಚಯ ಇರುತ್ತದೆ. ಚಾಸಾ-12 ನನ್ನ ಅತ್ತೆ ಇರುತ್ತಾರೆ. ದಿಃ 11.12.2025 ರಂದು ನನ್ನ ಗಂಡ ಮತ್ತು ನಮ್ಮೂರಿನ ಅಂಜನಪ್ಪ ಇವರು ಹಾತೂರಿನ ಪ್ರಸನ್ನ ರವರ ಮನೆಗೆ ಅಡಿಕೆ ಕೆಲಸಕ್ಕೆ ಬಂದಿದ್ದು, ದಿಃ 12.12.2025 ರಂದು ಪ್ರಸನ್ನ ಅವರು ನನ್ನ ಗಂಡನನ್ನು ಮತ್ತು ಅಂಜನಪ್ಪ ಇವರನ್ನು ಅಡಿಕೆ ಲೋಡ್ ಮಾಡಿಕೊಂಡು ಬರಲು ಕರೆದುಕೊಂಡು ಹೋಗಿದ್ದು, ಧನುಷ್ ಎಂಬುವವರು ಟ್ರಾಕ್ಟರ ಅನ್ನು ತೆಗೆದುಕೊಂಡು ಬಂದಿದ್ದು, ಸದರಿ ಟ್ರಾಕ್ಟರ್ ಗೆ ನನ್ನ ಗಂಡ ಮತ್ತು ಅಂಜನಪ್ಪ ಇವರು ತೋಟದಲ್ಲಿ ಇದ್ದ 30 ಚೀಲ ಅಡಿಕೆಯನ್ನು ಟ್ರಾಕ್ಟರ್ ಗೆ ಲೋಡ್ ಮಾಡಿ ಟ್ರಾಕ್ಟರ್ ತೆಗೆದುಕೊಂಡು ಹೋಗಲು ಪ್ರಸನ್ನ ಅವರು ಧನುಷ್ ಅವರಿಗೆ ಹೇಳಿದ್ದು, ನಂತರ ಸದರಿ ಟ್ರಾಕ್ಟರ್ ಟ್ರೇಲರ್ ನ ಅಡಿಕೆ ಮೂಟೆಗಳ ಮೇಲೆ ನನ್ನ ಗಂಡ ಕುಳಿತಿದ್ದು, ಅಂಜನಪ್ಪ ಮತ್ತು ಪ್ರಸನ್ನ ಇವರು ಬೈಕ್ ನಲ್ಲಿ ಟ್ರಾಕ್ಟರ್ ಹಿಂದುಗಡೆ ಹೋಗುತ್ತಿದ್ದು, ಸಂಜೆ 5.00 ಗಂಟೆ ಸುಮಾರಿಗೆ ಗುಡ್ಡೆ ಹಳ್ಳ ಕ್ರಾಸ್ ನಿಂದ ಮುಂದೆ ಹೋಗುತ್ತಿದ್ದಾಗ ನಾಯಿ ರಸ್ತೆಗೆ ಅಡ್ಡ ಬಂದಿದ್ದರಿಂದ ಟ್ರಾಕ್ಟರ್ ಅನ್ನು ಬಲಕ್ಕೆ ತಿರುಗಿಸಿದ ಕಾರಣ ಟ್ರಾಕ್ಟರ್ ಮೇಲೆ ಕುಳಿತಿದ್ದ ನನ್ನ ಗಂಡ ಕೆಳಕ್ಕೆ ಬಿದ್ದು, ಅವರ ಮೈಕೈಗೆ ಸೊಂಟದ ಹತ್ತಿರ ರಕ್ತಗಾಯವಾಗಿದ್ದು, ಅವರನ್ನು ಕೊಪ್ಪ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಅಲ್ಲಿಂದ ಅವರನ್ನು ಶಿವಮೊಗ್ಗ ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ರಸ್ತೆ ಮಾರ್ಗದಲ್ಲಿ ಮೃತ ಪಟ್ಟಿದ್ದು, ಸದರಿ ವಿಚಾರವನ್ನು ನನ್ನ ಮಾವನಾದ ನಾಗರಾಜ ಇವರಿಗೆ ಅಂಜನಪ್ಪ ಫೋನ್ ಮುಖಾಂತರ ತಿಳಿಸಿದ್ದು ಹಾಗೂ ಈ ಸಂಬಂಧ ನಾನು ಪೋಲಿಸರಿಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆ.

(ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿಕೊಂಡಿದ್ದು, ಪರಿಗಣಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>

1. ಆರೋಪಿಯು ಆ ದಿನ ಟ್ರಾಕ್ಟರ್ ಅನ್ನು ರಸ್ತೆಯ ತಿರುವಿನಲ್ಲಿ ನಾಯಿ ಅಡ್ಡ ಬಂದಿದ್ದರಿಂದ ಟ್ರಾಕ್ಟರ್ ನ ಇಂಜಿನ್ ಅನ್ನು ಬಲಕ್ಕೆ ದುಡುಕು ಮತ್ತು ನಿರ್ಲಕ್ಷತನದಿಂದ ಚಲಾಯಿಸಿದ ಕಾರಣ ನನ್ನ ಗಂಡ ಮೃತ ಪಟ್ಟಿರುತ್ತಾನೆ ಎಂದರೆ ಸರಿ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ G.D.ವಕೀಲರಿಂದಃ</u>

1. ಘಟನೆಯ ಬಗ್ಗೆ ಅಂಜನಪ್ಪ ಮತ್ತು ಪ್ರಸನ್ನ ಇವರು ನನಗೆ ಖುದ್ದಾಗಿ ಫೋನ್ ಮುಖಾಂತರ ಹೇಳಿರುವುದಿಲ್ಲ ಎಂದರೆ ಸರಿ. ಅಪಘಾತ ಆಗಿರುವ ಬಗ್ಗೆ ನನ್ನ ಗಂಡನ ಅಣ್ಣ ತಿಳಿಸಿರುತ್ತಾರೆ ಎಂದರೆ ಸರಿ. ದೂರನ್ನು ನನ್ನ ಗಂಡನ ಅಣ್ಣ ನಾಗರಾಜ ನೀಡಿರುತ್ತಾರೆ ಎಂದರೆ ಸರಿ. ನಾನು ಘಟನೆಯ ಬಗ್ಗೆ ಅಂಜನಪ್ಪ ಮತ್ತು ಪ್ರಸನ್ನ ಇವರನ್ನು ವಿಚಾರಿಸಿರುತ್ತೇನೆ ಎಂದು ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿ. ನನ್ನ ಗಂಡನ ಮರಣ ಸಂಬಂಧ ಪರಿಹಾರ ಕೋರಿ ಕೇಸನ್ನು ಹಾಕಿರುತ್ತೇವೆ ಎಂದರೆ ಸರಿ. ಅಪಘಾತದ ಬಗ್ಗೆ ಚಾಸಾ-1 ರವರನ್ನು ಹೊರತುಪಡಿಸಿ ನಾನು ಬೇರೆ ಯಾರನ್ನು ವಿಚಾರಣೆ ಮಾಡಿರುವುದಿಲ್ಲ ಎಂದರೆ ಸರಿ. ಆರೋಪಿಯ ತಪ್ಪಿನಿಂದ ಯಾವುದೇ ಅಪಘಾತ ಆಗದೇ ಇದ್ದರು ಪರಿಹಾರ ಪಡೆಯವ ಸಲುವಾಗಿ ಆರೋಪಿಯ ತಪ್ಪಿನಿಂದ ಅಪಘಾತ ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಹೇಳಿಕೆಯನ್ನು ಯಾರು ಮತ್ತು ಯಾವ ರೀತಿಯಲ್ಲಿ ಬರೆದುಕೊಂಡಿರುತ್ತಾರೆ ಎಂದು ನನಗೆ ಹೇಳಲು ಆಗುವುದಿಲ್ಲ. ಆರೋಪಿಯ ತಪ್ಪಿಲ್ಲದೇ ಇದ್ದರು ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ ಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ.

ಸಾಕ್ಷಿದಾರರ ಸಹಿಃ